154

ಮೂಕರಾಣಿ

★

ಸಾಮ್ರಾಟ ವಿಕ್ರಮಾದಿತ್ಯನ
ಒಂದು ಕಥೆ.

1957.

ಒಂದಾಣೆ ಮಾಲೆ

ಎರಡು ಏಕಾಂಕ ನಾಟಕಗಳು.

"ನಾವು ಸಾಹುಕಾರಕುಲದವರು"

(ಏಕಾಂಕ ಪ್ರಹಸನ)

ರಚಯಿತರು: **ಕುಡ್ಪಿ ವಾಸುದೇವ ಶೆಣೈ.**

ಬಿಡಿಪ್ರತಿಗೆ 0—4—0.

"ಮಹಾಶ್ವೇತಾ"

('ಪತ್ತೇದಾರಿ' ತರಗತಿಯ ಕಥಾವಸ್ತುವನ್ನೊಳಗೊಂಡ ಏಕಾಂಕ ನಾಟಕ)

ಅನುವಾದಕರು: **ವೈದ್ಯಗುರು ಎಂ. ಆರ್. ಭಟ್.**

ಬಿಡಿಪ್ರತಿಗೆ: 0—4—0.

ಇವೆರಡೂ ನಾಟಕಗಳನ್ನು ಅಂಚೆ ಮೂಲಕ ತರಿಸಿಕೊಳ್ಳಲಿಚ್ಛಿಸುವವರು, ಟಪ್ಪಾಲು ಖರ್ಚು ಕೂಡಿ 0—10—0ಗಳನ್ನು ಅಥವಾ 62 ನಯೆ ಪೈಸೆಗಳನ್ನು ಮನಿಯಾರ್ಡರ್ ಮೂಲಕ ಇಲ್ಲವೆ ಅಂಚೆಚೀಟುಗಳ ಮೂಲಕ ಕಳಿಸಬೇಕು.

ಪ್ರಭಾತ ಆಫೀಸು, ರಥಬೀದಿ, ಮಂಗಳೂರು.

ಮೂಕರಾಣಿ

★

[ರಾಜಾ ವಿಕ್ರಮನಿಗೆ ಸಂಬಂಧಿಸಿದ ಕತೆಗಳಲ್ಲಿ ಇದೂ ಒಂದು. ಅತ್ಯಂತ ಕುತೂಹಲದಾಯಕ ಘಟನೆಗಳಿಂದ ಕೂಡಿದೆ]

ಭೋಜರಾಜನು ವಿಕ್ರಮಾದಿತ್ಯನ ರಾಜ ಸಿಂಹಾಸನವನ್ನೇರಲು ಹೋದಾಗ ಚಿತ್ರಗುಣನು ಅವನಿಗೆ ಈ ವ್ಯಾಖ್ಯಾನವನ್ನು ಹೇಳಿದನು:

ಉಜ್ಜಯಿನಿ ನಗರದ ಮಧ್ಯದಲ್ಲಿ ಒಂದು ವೀಳೆಯದವನ ಚಿಕ್ಕ ಅಂಗಡಿಯಿತ್ತು. ಈ ಅಂಗಡಿಯಲ್ಲಿ ಕೆಲವು ಜನರು ಬಂದು ಕುಳಿತು ಕೊಂಡು ಮಾತುಕತೆಯಾಡಿ, ವೀಳೆಯ ತಿಂದು ಹೋಗುತ್ತಿದ್ದರು. ಅಲ್ಲಿಗೆ ನಿತ್ಯವೂ ಒಬ್ಬಳು ಸುಂದರ ಸ್ತ್ರೀಯೂ ವೀಳಯ ತೆಗೆದುಕೊಳ್ಳಲು ಬರುತ್ತಿದ್ದಳು. ಅವಳು, ಅಲ್ಲಿದ್ದುದರಲ್ಲಿ ಉತ್ತಮವಾದ ಎಲೆ ಅಡಿಕೆಗಳನ್ನು ಹೆಕ್ಕಿ ಕೊಂಡುಕೊಂಡು ಒಂದು ಸ್ವರ್ಣಮುದ್ರೆಯನ್ನು ಕೊಡುತಿದ್ದಳು. ವೀಳೆಯದವನಿಗೆ ಆ ಸ್ತ್ರೀಯ ಕುರಿತಾದ ವಿಷಯಗಳನ್ನು ತಿಳಿಯಲು ಬಹಳ ಉತ್ಸಾಹವಾಯಿತು. ಒಂದು ದಿನ ಅವನು ತನ್ನ ಪುರೋಹಿತನನ್ನು ಕರೆದು ಹೇಳಿದನು: "ಈ ಸ್ತ್ರೀಯು ಶ್ರೀಮಂತಪರಿವಾರದವಳೆಂದು ತೋರುತ್ತದೆ. ಆದರೆ, ಇವಳು ಸ್ವತಹ ವೀಳೆಯ ತೆಗೆದುಕೊಳ್ಳಲು ಏಕೆ ಬರುತ್ತಾಳೆಂದು ಗೊತ್ತಾಗುವುದಿಲ್ಲ. ತಾವು ಮೆಲ್ಲನೆ ಅವಳ ಹಿಂದೆ ಹೋಗಿ ಅವಳ ಮನೆಯನ್ನು ಕಂಡುಕೊಂಡು ನನಗೆ ಹೇಳಲೇಬೇಕು."

ಪುರೋಹಿತನು ಎಲ್ಲ ಮಾರ್ಗಗಳನ್ನು ದಾಟಿ ಮುಖ್ಯ ದ್ವಾರದಿಂದ ಹೊರಬಿದ್ದು ಅವಳನ್ನು ಅನುಸರಿಸಿದನು. ಕೊನೆಗೆ ಒಂದು ನಿರ್ಜನ ವನದಲ್ಲಿ ಪರ್ವತ–ಉಪತ್ಯಕೆಗಳ ಸಮೀಪ ಹೋಗಿ ಅವರಿಬ್ಬರೂ ಮುಟ್ಟಿದರು. ಅಲ್ಲಿ ಅವಳು ಒಂದು ಗುಹೆಯ ದ್ವಾರವನ್ನು ತೆರೆಯುವುದನ್ನು ಪುರೋಹಿತನು ಕಂಡನು. ಅವನೂ ಅವಳ ಹಿಂದೆಯೇ ಒಳನುಗ್ಗಿದನು.

ಇಬ್ಬರೂ, ಒಂದು ಸುಂದರವಾದ ಉಪವನಕ್ಕೆ ತಲಪಿದರು. ಅಲ್ಲಿ ಬಹು ಸೌಂದರ್ಯವತಿಯರಾದ, ಯೌವನಮದಭರಿತೆಯರಾದ ಅನೇಕ

ಕನ್ಯೆಯರು ತಲೆಯ ಮೇಲೆ ಸ್ವರ್ಣಘಟಗಳನ್ನು ಇಟ್ಟುಕೊಂಡು ಆಮೋದ-ಪ್ರಮೋದಗಳಲ್ಲಿ ಲೀನರಾಗಿದ್ದರು. ಕೆಲವರು ಚೆಂಡಾಟ ಆಡುತಿದ್ದರು. ಆಕಸ್ಮಾತ್ ಅವರ ಚೆಂಡು ಬಾವಿಗೆ ಬಿತ್ತು. ಅವರಲ್ಲಿ ಒಬ್ಬಳು ಹುಡುಗಿಯು ಬಾವಿಯ ಬಳಿಗೆ ಹೋಗಿ ಚೆಂಡನ್ನು ಸಂಬೋಧಿಸಿ ಹೇಳಿದಳು: "ಮೂಕರಾಣಿಯ ಆಜ್ಞೆಯಾಗಿದೆ— ನೀನು ಹೊರಗೆ ಬರಬೇಕೆಂದು!"

ಕೂಡಲೇ ಚೆಂಡು ಹಾರಿ, ಬಾವಿಯಿಂದ ಹೊರಬಂದಿತು. ಇದನ್ನು ನೋಡಿ ಪುರೋಹಿತನಿಗೆ ಬಹಳ ಆಚ್ಚರಿಯಾಯಿತು. ಅವನು ಆ ಹುಡುಗಿಯರ ಬಳಿಗೆ ಹೋಗಿ ಕೇಳಿದನು: "ನಿರ್ಜೀವ ವಸ್ತುಗಳು ಕೂಡ ಯಾವಳ ಆಜ್ಞೆ ಪಾಲಿಸುತ್ತವೋ ಆ ಮೂಕರಾಣಿಯು ನಿಮ್ಮೊಳಗೆ ಯಾರಾಗಿರುವಳು?"

ಅವರಲ್ಲಿ ಒಬ್ಬಳು ಹುಡುಗಿಯು ಬಹಳ ಕೋಪದಿಂದ ಹೇಳಿದಳು: "ನೀವು ಯಾರು? ನಿಮಗೆ ಮೂಕರಾಣಿಯ ವಿಷಯ ಕೇಳಲು ಹೇಗೆ ಧೈರ್ಯ ಬಂತು? ದೊಡ್ಡ ದೊಡ್ಡ ರಾಜಮಹಾರಾಜರಿಗೆ ಕೂಡ ಅವಳ ದರ್ಶನ ದೊರೆಯುವುದಿಲ್ಲ!"

ಆದರೆ ಪುರೋಹಿತನು ಅಲ್ಲಿಂದ ಹೊರಡಲಿಲ್ಲ. ನಿರಾಶನಾಗಿ ಹೋಗುವ ಬದಲು ಅವನು ಅಲ್ಲಿಯೇ ಸಾಯುವುದು ಲೇಸೆಂದು ಎಣಿಸಿದನು.

ಈ ಸಮಾಚಾರವು ಮೂಕರಾಣಿಯ ತನಕ ಮುಟ್ಟಿತು. ಅವಳು ಪುರೋಹಿತನಿಗೆ, ತೋಟದ ಕೆರೆಯಲ್ಲಿ ಸ್ನಾನಮಾಡಿಸುವಂತೆ ಆಜ್ಞೆ ಕೊಟ್ಟಳು. ನೀರಿಗೆ ಇಳಿಯುತ್ತಲೇ ಅವನು ಮುಳುಗಿಹೋದನು. ಪ್ರಜ್ಞೆ ಬಂದಾಗ, ತಾನು ಮೀಳಿಯ ದಂಗಡಿಯಲ್ಲಿರುವಂತೆ ಕಂಡನು. ಆಗ ನಡು ರಾತ್ರೆ ಕಳೆದಿತ್ತು. ಪುರೋಹಿತನು ತನ್ನ ದುರ್ಭಾಗ್ಯಕ್ಕಾಗಿ ಕಣ್ಣೀರಿಳಿಸುತಿದ್ದನು. ಆಗಲೇ ಅತ್ತ ಬರುತ್ತಿರುವ ವಿಕ್ರಮರಾಜನು, ಪುರೋಹಿತನನ್ನು ಕುರಿತು, ಅವನ ದುಃಖದ ಕಾರಣವನ್ನು ವಿಚಾರಿಸಿದನು. ಪುರೋಹಿತನು ತನ್ನ ಆಶ್ಚರ್ಯಕರವಾದ ಅನುಭವವನ್ನು ಹೇಳಿದನು. ಇದನ್ನು ಕೇಳಿ ರಾಜನು ಅತ್ಯಂತ ಉತ್ಕಂಠಿತನಾದನು. ಅವನು ಆ ಸ್ತ್ರೀಯನ್ನು ಹಿಂಬಾಲಿಸುವ ಸಂಕಲ್ಪವನ್ನು ಮಾಡಿದನು.

ಮರುದಿನ ಸಾಯಂಕಾಲ, ರಾಜಾ ವಿಕ್ರಮ ಮತ್ತು ಪುರೋಹಿತನು

ಆ ಸ್ತ್ರೀಯ ಬರುವಿಕೆಯನ್ನು ಪ್ರತೀಕ್ಷಿಸತೊಡಗಿದರು. ಅವಳು ತನ್ನ ನಿರ್ದಿಷ್ಟ ಸಮಯದಲ್ಲಿ ವೀಳೆಯ ಕೊಳ್ಳಲು ಬಂದಳು. ರಾಜಾ ವಿಕ್ರಮನು ಶಸ್ತ್ರಾಸ್ತ್ರಗಳಿಂದ ಸುಸಜ್ಜಿತನಾದನು. ಅವನು ಆ ಸ್ತ್ರೀಯನ್ನು ಹಿಂಬಾಲಿಸಿದನು ಮತ್ತು ಸ್ವಲ್ಪ ಸಮಯದಲ್ಲೆ ಮೂಕರಾಣಿಯ ವಿಚಿತ್ರ ನಗರಕ್ಕೆ ಬಂದು ಮುಟ್ಟಿದನು. ಅಲ್ಲಿ, ಒಬ್ಬಳು ಸುಂದರ ಯುವತಿಯು ಬಾವಿಯ ಕಡೆಗೆ ಹೋಗುವುದನ್ನು ಕಂಡನು. ಅವಳು ತನ್ನ ಕೊಡವನ್ನು ನೀರಲ್ಲಿ ಮುಳುಗಿಸಿ, ಮೂಕರಾಣಿಯ ಕಡೆಯಿಂದ ಕೊಡವು ಬೇಗನೆ ಬರಲೆಂದು ಆಜ್ಞಾಪಿಸಿದಳು. ಕೂಡಲೇ, ತುಂಬಿದ ಕೊಡವು ಬಾವಿಯಿಂದ ಮೇಲೇರಿ ಹೊರಬಂತು.

ರಾಜಾ ವಿಕ್ರಮನು ಈ ದೃಶ್ಯವನ್ನು ಕಂಡು ಅತ್ಯಂತ ಆಶ್ಚರ್ಯ ಚಕಿತನಾದನು. ಆ ಸ್ತ್ರೀಯನ್ನು ತಡೆದು, ಅವರ ರಾಣಿಯು ಯಾರೆಂದು ಪ್ರಶ್ನಿಸಿದನು. ರಾಜನನ್ನು ನೋಡಿ ಪ್ರಭಾವಿತಳಾಗಿ ಆ ಸ್ತ್ರೀಯು, ಕೂಡಲೇ ರಾಜನ ಆಗಮನವನ್ನು ರಾಣಿಗೆ ತಿಳಿಸುವೆನೆಂದು ಹೇಳಿದಳು.

ಸ್ವಲ್ಪ ಹೊತ್ತಿನಲ್ಲೇ ಆ ಮೂಕರಾಣಿಯು ರಾಜನನ್ನು ಮಹೆಲಿಗೆ ಬರುವಂತೆ ಹೇಳಿಕಳುಹಿಸಿದಳು. ರಾಜನಿಗೆ ಉಳಕೊಳ್ಳಲು ಬಹಳ ಸುಂದರವಾದ, ಭವ್ಯವಾದ ಕೋಣೆಯನ್ನು ಕೊಟ್ಟಳು. ರಾಜಾ ವಿಕ್ರಮನು ರಾಣಿಯ ವಿಷಯ ಅನೇಕ ಸಂಗತಿಗಳನ್ನು ತಿಳಿದುಕೊಂಡನು. ವಿವರ ಹೀಗಿತ್ತು: ಒಂದು ಬಾರಿ ಕೆಲವು ಅಪ್ಸರೆಯರು ತಮಗೆ ಆಡಲಿಕ್ಕಾಗಿ ಅನೇಕ ಗೊಂಬೆಗಳನ್ನು ರಚಿಸಿದರು. ಆಟವಾಡಿ ಮುಗಿದ ಅನಂತರ ಅವರು ಆ ಗೊಂಬೆಗಳ ಸೌಂದರ್ಯವನ್ನು ಕಂಡು ಮುಗ್ಧರಾದರು. ಅವರು ಮನುಷ್ಯರಂತೆ ಈ ಗೊಂಬೆಗಳು ನಡೆಯಲೂ ತಿರುಗಾಡಲೂ ಕಲಿತರೆ ಚೆನ್ನಾಗುವುದೆಂದು ಯೋಚಿಸಿದರು. ಅನಂತರ, ಅವರು ಈ ನಿರ್ಜೀವ ಗೊಂಬೆಗಳಲ್ಲಿ ಪ್ರಾಣಸಂಚಾರವನ್ನು ಮಾಡಿ ಎಲ್ಲ ಗುಣಗಳ ಆರೋಪಣಮಾಡಿದರು. ಎಲ್ಲಕ್ಕಿಂತ ಸುಂದರವಾದ ಗೊಂಬೆಗೆ ರಾಣಿಯ ಉಪಾಧಿ ಕೊಟ್ಟರು. ಮತ್ತು ಎಲ್ಲಿಯ ವರೆಗೆ ಯಾರೂ ಅವಳಿಗೆ ವಾಣಿಯ ವರದಾನ ಮಾಡುವುದಿಲ್ಲವೋ ಅಲ್ಲಿಯ ವರೆಗೆ ಅವಳು ನಾಲ್ಕು ಪರದೆಗಳೊಳಗೆ ತನ್ನನ್ನು ಅಡಗಿಸಿಕೊಳ್ಳಬೇಕು. ಯಾವ ಪುರುಷನನ್ನೂ ಭೇಟಿಯಾಗಬಾರದು ಎಂಬ ಪ್ರತಿಬಂಧವನ್ನು ಹಾಕಿದರು. ಯಾವನಾದರೂ ಪುರುಷನು ಅವ

ಳೊಡನೆ ಮಾತಾಡಿ ಅಸಫಲನಾದರೆ ಅವನನ್ನು ಬಂಧಿಯಾಗಿ ಮಾಡ ಲಾಗುವುದೆಂದರು.

ರಾಜಾ ವಿಕ್ರಮನು ಈ ಕಾರ್ಯದಲ್ಲಿ ಸಫಲನಾಗಬೇಕೆಂದು ಸಂಕಲ್ಪಿಸಿದನು. ಮತ್ತು ರಾಣಿಯೊಡನೆ ಕೇಳಿದ ಪ್ರಶ್ನೆಗೆ "ಅಹುದು" ಅಥವಾ "ಅಲ್ಲ" ಎಂದು ಉತ್ತರ ಕೊಟ್ಟರೆ ಸಾಕೆಂದು ಪ್ರಾರ್ಥಿಸಿದನು. ಆದರೆ, ರಾಣಿಯು ಇದನ್ನೊಪ್ಪಲಿಲ್ಲ. ಇದರಿಂದ ವಿಕ್ರಮನು ಹತಾಶನಾಗಲಿಲ್ಲ. ತಾನು ಹೇಗಾದರೂ ಪ್ರಯತ್ನಿಸಿ, ರಾಣಿಯು ತನ್ನ ಮಾತು ಕೇಳುವಂತೆ ಮಾಡುವೆನೆಂದು ಘೋಷಿಸಿದನು.

ಅಮರಲೋಕದ ಒಬ್ಬ ದೇವತೆಯು ಬೇತಾಲನ ಅತ್ಯಂತ ಘನಿಷ್ಠ ಮಿತ್ರನಾಗಿದ್ದನು. ಆವನು ಮೆಲ್ಲನೆ ರಾಣಿಯ ಕರ್ಣಛಿದ್ರದಲ್ಲಿ ಪ್ರವಿಷ್ಟನಾದನು ಮತ್ತು ಎಲ್ಲರೂ ಆಶ್ಚರ್ಯಚಕಿತರಾಗುವಂತೆ ಹೇಳಿದನು: "ಓ ರಾಜನೇ! ನೀನು ನಿನ್ನ ಆಖ್ಯಾನವನ್ನು ಹೇಳು. ರಾಣಿಯ ಕಿವಿಗಳು ನಿನ್ನ ಮಾತಿಗೆ ಉತ್ತರಕೊಡುವುವು. ಇವಳು ಪಾಪ, ಮೂಕಿಯಿರುವಳು. ಇಷ್ಟು ದೊಡ್ಡ ರಾಜನು ಮಾತಾಡುವಾಗಲೂ ಉತ್ತರ ಕೊಡುವುದಿಲ್ಲ. ಅಹುದು, ಅಹುದು; ದಯಮಾಡಿ ಮುಂದೆ ಹೇಳು!"

ರಾಜನು ತನ್ನ ಕಥೆಯನ್ನು ಈ ಪ್ರಕಾರವಾಗಿ ಹೇಳಿದನು: ಮೇಲಾಪುರ ಪಾಟ್ನಾ ನಗರದಲ್ಲಿ ರಾಜಾ ಚಂದ್ರಾದಿತ್ಯನು ಆಳುತಿದ್ದನು. ಅಲ್ಲಿಯ ಪ್ರಜೆಗಳು ಸುಖಿಗಳಾಗಿಯೂ ಸಂತುಷ್ಟರಾಗಿಯೂ ಇದ್ದರು. ಆ ನಗರದಲ್ಲಿ ನಾಲ್ಕು ಮಂದಿ ಹುಡುಗರೂ ವಾಸಿಸುತಿದ್ದರು. ಅವರಲ್ಲಿ ಒಬ್ಬನು ಬ್ರಾಹ್ಮಣನು, ಇನ್ನೊಬ್ಬನು ವೈಶ್ಯನು, ಮೂರನೆಯವನು ಬಂಗಾರದ ನಗಗಳನ್ನು ಮಾಡುವವನು, ನಾಲ್ಕನೆಯವನು ಬಟ್ಟೆಗಳನ್ನು ನೇಯುವವನು. ಈ ನಾಲ್ಕು ಮಂದಿಯೂ ಯಾವ ಉದ್ಯೋಗ-ವ್ಯವಸಾಯವನ್ನೂ ಮಾಡುತ್ತಿರಲಿಲ್ಲ. ಸಮಯವನ್ನೆಲ್ಲ, ಪೇಟೆಯಲ್ಲಿ ನಿರರ್ಥಕವಾಗಿ, ತಿರುಗಾಡಿ ಕಳೆಯುತಿದ್ದರು. ಇದರಿಂದಾಗಿ ಅವರ ಮಾತಾಪಿತೃರು ಅವರ ಭಾವೀ ಉನ್ನತಿಯ ಕಡೆಗೆ ದೃಷ್ಟಿಯಿಟ್ಟು ಅತ್ಯಂತ ಚಿಂತಿತರಾದರು. ಒಂದು ದಿನ ಆ ಹಿರಿಯರು ಅವರನ್ನೆಲ್ಲ ಲಜ್ಜಿತರನ್ನಾಗಿ ಮಾಡಿದರು.

ಮಾತಾಪಿತೃರ ಉಪೇಕ್ಷೆಯಿಂದ ಕೂಡಿದ ಗದರಿಸುವಿಕೆಯನ್ನು ಕೇಳಿ ಅವರಿಗೆ ಕಾರ್ಯವನ್ನು ಕೈಕೊಳ್ಳುವ ಪ್ರೇರಣೆಯಾಯಿತು. ಇಲ್ಲಿಂದ

ದೂರ ಎಲ್ಲಿಯಾದರೂ ಹೋಗಿ ಏನಾದರೂ ಕೆಲಸವನ್ನು ಕಲಿತುಕೊಂಡು ಜೀವನನಿರ್ವಾಹಕ್ಕೆ ಯೋಗ್ಯರಾಗಬೇಕೆಂದು ನಾಲ್ವರೂ ನಿಶ್ಚಯಿಸಿದರು. ಒಂದು ದಿನ ಕತ್ತಲಾದ ರಾತ್ರಿ ಸಮಯದಲ್ಲಿ ಮೌನವಾಗಿ, ಯಾರೊಡನೆಯೂ ಹೇಳದೆ—ಕೇಳದೆ ಮನೆಯಿಂದ ಹೊರಬಿದ್ದರು. ಮೊದಲಿನ ರಾತ್ರಿಯನ್ನು ಒಂದು ಸಣ್ಣ ಹಳ್ಳಿಯಲ್ಲಿ ಕಳೆದರು.

ಅಲ್ಲಿ ಬಂಗಾರ ಮಾಡುವವನಿಗೆ ಒಳ್ಳೆಯ ಕೆಲಸ ಸಿಕ್ಕಿತು. ಅವನು ಅಲ್ಲಿಯೇ ನೆಲಸಿದನು. ಅವನ ಇತರ ಮೂವರು ಸ್ನೇಹಿತರು ಅವನನ್ನು ಬೀಳ್ಕೊಟ್ಟರು.

ಮುಂದೆ ವೈಶ್ಯನಿಗೆ ಕೆಲಸ ಸಿಕ್ಕಿತು. ಅವನು ತನ್ನ ಇಬ್ಬರು ಸಂಗಡಿಗರಿಂದ ದೂರವಾದನು.

ಮೂರನೇ ದಿನ ಬಟ್ಟೆ ನೇಯುವವನ ವ್ಯವಸ್ಥೆಯೂ ಆಯಿತು. ಈ ಪ್ರಕಾರ ಅವನು ತನ್ನ ಯೋಗ್ಯತೆಗೆ ತಕ್ಕಂತೆ ಕೆಲಸ ಹುಡುಕುವುದರಲ್ಲಿ ಸಫಲನಾದನು. ಮುಂದೆ ಬ್ರಾಹ್ಮಣನೊಬ್ಬನೇ ಪ್ರಯಾಣ ಬೆಳೆಸಿದನು. ಸಮಯಾನುಸಾರ ಅವನು ನರ್ಮದಾನದಿಯ ದಡಕ್ಕೆ ಬಂದು ಮುಟ್ಟಿದನು. ಅಲ್ಲಿ ಸಮೀಪವೇ ಅನೇಕ ವಿದ್ವಾಂಸ, ದುರಂಧರರಾದ ಪಂಡಿತರಿಗೆ ಶರಣು ಹೋದನು. ಅವರು ಇವನನ್ನು ಅನುಗ್ರಹ ಪೂರ್ವಕವಾಗಿ ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿದರು. ಮತ್ತು ಎಲ್ಲ ಶಾಸ್ತ್ರಗಳಲ್ಲೂ ತರಬೇತುಗೊಳಿಸುವ ಆಶ್ವಾಸನೆ ಕೊಟ್ಟರು.

ಸಂಪೂರ್ಣ ಹದಿನೆರಡು ವರ್ಷಗಳನ್ನು ಅವನು ಅಲ್ಲಿ ಕಳೆದನು. ಆಗ ಅವನ ಗುರುಗಳು ಅವನು ಎಲ್ಲ ವಿದ್ಯೆಗಳಲ್ಲಿ ಪೂರ್ಣ ಪಾರಂಗತನಾದನೆಂದು ಆದೇಶ ಕೊಟ್ಟು, ಮನೆಗೆ ಹಿಂತಿರುಗಲು ಅನುಮತಿಯನ್ನಿತ್ತರು. ದಾರಿಯಲ್ಲಿ ಅವನಿಗೆ ಅವನ ಮಿತ್ರರು ಸಿಕ್ಕಿದರು. ಅವರೆಲ್ಲರೂ ತಮ್ಮ ತಮ್ಮ ಕಾರ್ಯಗಳಲ್ಲಿ ದಕ್ಷರಾಗಿದ್ದರು. ಅವರೂ ತಮ್ಮ ಯಜಮಾನರ ಅನುಮತಿ ಪಡೆದು ಹೊರಟರು.

ಹೀಗೆ ನಾಲ್ವರೂ ಸೇರಿ ಬರುವಾಗ ದಾರಿಯಲ್ಲಿ ಒಂದು ಬಹಳ ಭಯಂಕರ, ನಿರ್ಜನ ವನವು ಸಿಕ್ಕಿತು. ಬಹಳ ಆಯಾಸಗೊಂಡಿದ್ದರಿಂದ ಉಪಾಯವಿಲ್ಲದೆ ಅವರು ರಾತ್ರಿಯನ್ನು ಅಲ್ಲೇ ಕಳೆಯಬೇಕಾಯಿತು. ನಾಲ್ವರೂ ಸೇರಿ ತಮ್ಮಲ್ಲಿ ಒಬ್ಬೊಬ್ಬನೇ ಪಹರೆ ಮಾಡಿ, ಉಳಿದವರು ಮಲಗುವುದೆಂದು ನಿಶ್ಚಯಿಸಿದರು.

ಮೊದಲು ಬಡಗಿಗೆ ಪಹರೆಮಾಡುವ ಸರದಿ ಬಂತು. ತನ್ನ ಸಮಯ ವನ್ನು ಕಳೆಯಲು ಅವನು ಅಲ್ಲಿ ಬಿದ್ದ ಒಂದು ಮರದ ತುಂಡನ್ನು ಕೆತ್ತಲು ಆರಂಭಮಾಡಿದನು. ತನ್ನ ಆಯುಧಗಳಿಂದ ಸುಂದರವಾದುದೊಂದು ಗೊಂ ಬೆಯನ್ನು ತಯಾರಿಸಿದನು. ನೆಯ್ಗೆಯವನ ಸರದಿ ಬಂದಾಗ, ಅವನ ದೃಷ್ಟಿ ಆ ಗೊಂಬೆಯ ಮೇಲೆ ಬಿತ್ತು. ಅವನು ತನ್ನ ಚತುರತೆ ಮತ್ತು ಬುದ್ಧಿ ಕೌಶಲ್ಯದಿಂದ ಅತ್ಯಂತ ಸುಂದರವಾದ ಬಟ್ಟೆಗಳನ್ನು ತಯಾರಿಸಿ, ಗೊಂಬೆಗೆ ತೊಡಿಸಿದನು. ಮೂರನೆಯದಾಗಿ, ಬಂಗಾರಮಾಡುವವನು ತನ್ನ ಕೆಲಸಕ್ಕೆ ಹಾಜರಾದನು. ಅಲ್ಲಿ ಅವನಿಗೆ ಕೆಲವು ಸರಿಗೆಗಳು ಬಿದ್ದಿರು ವುದು ಕಂಡುಬಂತು. ಇದರಿಂದ ಅವನು ಚಂದದ ನಗಗಳನ್ನು ತಯಾರಿಸಿ ಗೊಂಬೆಯನ್ನು ಶೃಂಗರಿಸಿದನು. ಎಲ್ಲರ ನಂತರ ಬ್ರಾಹ್ಮಣ ಕುಮಾರನ ಸರದಿ ಬಂತು. ತನ್ನ ಮೂವರು ಸಂಗಾತಿಗಳ ಬುದ್ಧಿ ಚಾತುರ್ಯ ಮತ್ತು ಗೊಂಬೆಯ ಸೌಂದರ್ಯದಿಂದ ಅವನು ಪ್ರಭಾವಿತನಾಗಿ, ತನ್ನ ಮಂತ್ರಬಲ ದಿಂದ ಅದಕ್ಕೆ ಜೀವಕೊಟ್ಟನು. ನಿರ್ಜೀವ ಗೊಂಬೆಯು ಸುಂದರ ಕನ್ಯೆಯ ರೂಪದಲ್ಲಿ ಪರಿವರ್ತಿತವಾಯಿತು.

ಬೆಳಗಾಗುತ್ತಲೇ ನಾಲ್ವರೂ ಮಿತ್ರರೊಳಗೆ ಜಗಳವಾಗತೊಡಗಿತು. ಎಲ್ಲರೂ ಆ ಹುಡುಗಿಯ ಮೇಲೆ ಆಸಕ್ತರಾಗಿದ್ದರು. ಅವಳನ್ನು ಯಾರು ಮದುವೆಯಾಗಬೇಕೆಂಬ ವಿಷಯದಲ್ಲಿ ವಾದ-ವಿವಾದ ತೊಡಗಿತ್ತು. ಕಡೆಗೆ ಅವರು ಈ ಸಂಗತಿಯನ್ನು ಅನ್ಯ ಚತುರವ್ಯಕ್ತಿಯಿಂದ ತೀರ್ಮಾನಿಸು ವುದೆಂದು ನಿಶ್ಚಯಿಸಿದರು. ಆದುದರಿಂದ ಏ, ಗುಣವತಿರಾಣಿಯ ಕರ್ಣ ಕುಂಡಲವೇ! ಯಾರು ಆ ಹುಡುಗಿಯನ್ನು ಪಡೆಯಬಹುದೆಂದು ಹೇಳ ಬಲ್ಲೆಯಾ?"

ರಾಜನು ರಾಣಿಯ ಕರ್ಣಕುಂಡಲವನ್ನು ಕುರಿತು ಈ ಪ್ರಕಾರವಾಗಿ ಪ್ರಶ್ನಿಸುತ್ತಲೇ ಕುಂಡಲದೊಳಗಿನ ಅದೃಶ್ಯಬೇತಾಲನು ಉತ್ತರಕೊಟ್ಟನು: "ಅಹುದು, ನಿಸ್ಸಂದೇಹವಾಗಿಯೂ ಎಲ್ಲರಿಗಿಂತ ಹೆಚ್ಚಿನ ಅಧಿಕಾರಿಯು ಆ ಬ್ರಾಹ್ಮಣಯುವಕನೇ ಆಗಿರುವನು; ಏಕೆಂದರೆ, ಅವನು ಅವಳಲ್ಲಿ ಪ್ರಾಣ ಸಂಚಾರವನ್ನು ಉಂಟುಮಾಡಿರುವನು!"

ಈ ಉತ್ತರವನ್ನು ಕೇಳಿ ಮೂಕರಾಣಿಯು ಕೋಪಗೊಂಡು ಹೇಳಿ ದಳು: "ಓ ನನ್ನ ಕರ್ಣಕುಂಡಲವೇ! ನೀನು ಮೂರ್ಖನಾಗಿರುವೆ.

ನಿನಗೆ ಸ್ವಲ್ಪವೂ ಬುದ್ಧಿಯಿಲ್ಲ, ನೀನು ನನ್ನ ಕರ್ಣವನ್ನು ಅಲಂಕರಿಸಲು ಯೋಗ್ಯನಲ್ಲ."

ಆಗ ಕರ್ಣಕುಂಡಲವು ಪ್ರತ್ಯುತ್ತರವಾಗಿ ಹೇಳಿತು: "ನಾನು ಮೂರ್ಖನಿರುವೆನಾದರೆ ನೀನೇ ಏಕೆ ಇದಕ್ಕೆ ಸರಿಯಾದ ಉತ್ತರವನ್ನು ಕೊಡಲಿಲ್ಲ?"

ಇದಕ್ಕೆ ರಾಣಿ ಹೇಳಿದಳು: "ಓಹೋ! ಯಾರು ಮೊದಲು ಗೊಂಬೆಯನ್ನು ನಿರ್ಮಿಸಿದರೋ, ಅವನು ಅವಳ ತಂದೆಯಾದನು; ಯಾರು ಅವಳಿಗೆ ಬಟ್ಟೆಗಳನ್ನು ತೊಡಿಸಿದನೋ ಅವನು ತಾಯಿಯಾದನು; ಯಾರು ಅವಳಿಗೆ ಜೀವಕೊಟ್ಟನೋ ಅವನು ಅವಳ ಸೃಷ್ಟಿಕರ್ತನಾದನು. ಆದ್ದರಿಂದ ಆ ಭೂಷಣಗಳಿಂದ ಶೃಂಗರಿಸಿದವನೇ ಅವಳ ಜೀವನ-ಸಂಗಾತಿಯಾಗಲು ಯೋಗ್ಯನು!"

ಕರ್ಣಕುಂಡಲವು ನಕ್ಕು ಹೇಳಿತು: "ಓ ರಾಣಿಯೇ! ನಾನು ತಪ್ಪು ಉತ್ತರಕೊಟ್ಟದ್ದಕ್ಕಾಗಿ ನನಗೆ ಬಹಳ ಸಂತೋಷ ಏಕೆಂದರೆ, ನೀನು ಸ್ವತಹ ರಾಜನೊಡನೆ ಮಾತಾಡಿದೆ. ಆದ್ದರಿಂದ ನಿನ್ನ ಪ್ರಥಮ ಆಹರಣವು ನಷ್ಟವಾಗುವದು." ಇದನ್ನು ಕೇಳಿ ರಾಣಿಯು ತನ್ನನ್ನು ಸಾವರಿಸಿಕೊಂಡು ಪುನಃ ಮೌನವನ್ನು ಧರಿಸಿದಳು.

ವಿಕ್ರಮನು ಹೇಳಿದನು: "ನಿನಗೆ ನನ್ನೊಡನೆ ಹೆಚ್ಚು ಮಾತಾಡಲು ಮನಸ್ಸಿಲ್ಲದಿದ್ದರೆ ನಾನು ನಿನ್ನನ್ನು ತೊಂದರೆಪಡಿಸುವದಿಲ್ಲ. ಆದರೆ, ನಿನ್ನ ಕುತ್ತಿಗೆಯ ಸರವು ತನ್ನ ಮಾತುಗಳಿಗೆ ಅಗತ್ಯವಾಗಿ ಉತ್ತರ ಕೊಡುವುದು."

ಬೇತಾಲನು ಕೂಡಲೇ ಸರದೊಳಗೆ ಅಡಗಿಕೊಂಡು ಉತ್ತರಕೊಟ್ಟನು: "ನಾನು ಅವಶ್ಯವಾಗಿ ನಿಮ್ಮ ಆಜ್ಞೆಯನ್ನು ಪಾಲಿಸುವೆನು."

ರಾಜಾ ವಿಕ್ರಮನ ಇನ್ನೊಂದು ಕಥೆಯು ಪ್ರಕಾಶವಾಗಿ ಹರಿಯಿತು: "ರಾಜನಗರದ ರಾಜನು ರಾಜಸೇನನಾಗಿದ್ದನು. ಇವನು ತನ್ನ ರಾಣಿಯಾದ ಸತ್ಯವತಿಯೊಡನೆ ಸುಖಸಂತೋಷದಿಂದ ರಾಜ್ಯಭಾರವನ್ನು ನಡೆಸುತಿದ್ದನು. ಬಹಳ ಸಮಯದ ವರೆಗೆ ಅವನಿಗೆ ಪುತ್ರಸಂತಾನವಾಗಲಿಲ್ಲ. ಆಗ ಅವನು ಅತ್ಯಂತ ಚಿಂತಿತನೂ ಉದಾಸನೂ ಆದನು. ಕೊನೆಗೆ ನಿರಾಶನಾಗಿ ಗಂಗಾಮಾತೆಯನ್ನು ಮರೆಹೊಕ್ಕನು. ಆರು ತಿಂಗಳ ವರೆಗೆ ಘೋರ ತಪಸ್ಸನ್ನು ಮಾಡಿದನು. ಭಗವಾನ್ ಶಿವನು ಅವನ ಆರಾಧನೆಯಿಂದ ಅತ್ಯಂತ ಪ್ರಸನ್ನನಾಗಿ ಪುತ್ರಸಂತಾನವಾಗಲೆಂದು ಹರಸಿದನು. ಮತ್ತು ಕಾಲಾಂತರದಲ್ಲಿ ಶಿವನನ್ನು ಮರೆಯಬಾರದೆಂದು ಹೇಳಿದನು.

ತಕ್ಕ ಸಮಯದಲ್ಲಿ ರಾಣಿಗೆ ಪುತ್ರೋದಯವಾಯಿತು. ರಾಜ್ಯದಲ್ಲೆಲ್ಲ ಸುಖಸಂತೋಷಗಳ ಉತ್ಸವಗಳು ನಡೆದುವು. ನಿತ್ಯವೂ ಶಿವನಿಗೆ ಮಹಾ ಪೂಜೆಗಳು ನಡೆದುವು. ಮಗುವು ಬೇಗಬೇಗನೆ ಬೆಳೆಯತೊಡಗಿತು; ಮುಂದೆ ಸುಂದರನಾದ ರಾಜಕುಮಾರನಾದನು. ಹದಿನೆರಡು ವರ್ಷ ಪ್ರಾಯದಿಂದಲೇ ಮಹಾ ಶಿವೋಪಾಸಕನಾದನು.

ಕೆಲವು ವರ್ಷಗಳ ನಂತರ ಅವನ ವಿವಾಹವು ರಾಜಕುಮಾರಿ ರೂಪ ವತಿಯೊಡನೆ ನಡೆಯಿತು. ದಿಬ್ಬಣವು ಬಹಳ ವಿಜೃಂಭಣೆಯಿಂದ ನಡೆ ಯಿತು. ಆದರೆ, ರಾಜಕುಮಾರಿಯನ್ನು ಮಾತ್ರ ಬೀಳ್ಕೊಳ್ಳಲಿಲ್ಲ. ಏಕೆಂ ದರೆ, ಕೆಲವು ದಿವಸಗಳ ವರೆಗೆ ಗ್ರಹಗಳು ಕೆಟ್ಟವಿರುವುದರಿಂದ, ಅವುಗಳ ಸಮಯ ಕಳೆದನಂತರ ರಾಜಕುಮಾರಿಯು ಪತಿಗೃಹಕ್ಕೆ ತೆರಳಬಹುದೆಂದು ಜ್ಯೋತಿಷಿಗಳು ಹೇಳಿದ್ದರು. ಒಂದು ತಿಂಗಳ ನಂತರ ಆಕೆಯನ್ನು ಕರೆ ತರಲು ಪುರೋಹಿತನನ್ನು ಕಳುಹಿಸಲಾಯಿತು. ಆದರೆ, ಯುವರಾಜ್ಞಿಯು, ಸ್ವತಹ ರಾಜಕುಮಾರನು ಕರೆದುಕೊಂಡು ಹೋಗಲು ಬಾರದ ವಿನಹ ತಾನು ಹೊರಡುವುದಿಲ್ಲವೆಂದು ಹಟಹಿಡಿದಳು. ಪತಿಯು ಒಬ್ಬ ವಿಶ್ವಾಸೀ ವ್ಯಕ್ತಿಯೊಂದಿಗೆ ಹೊರಟುಬರಬೇಕೆಂದು ಹೇಳಿಕಳುಹಿಸಿದಳು.

ರಾಜಕುಮಾರನು ಪತ್ನಿಯ ಆದೇಶದಂತೆ ಕೇವಲ ಸಚಿವ ಪುತ್ರ ನೊಬ್ಬನೊಂದಿಗೆ ಶೀತಲಪುರಕ್ಕಾಗಿ ಹೊರಟನು.

ದಾರಿಯಲ್ಲಿ ಅವರಿಗೆ ಒಂದು ಭವ್ಯ ಶಿವಮಂದಿರವು ಸಿಕ್ಕಿತು. ಸಮೀಪ ದಲ್ಲಿರುವ ಕೊಳದಲ್ಲಿ ಕಮಲದ ಪುಷ್ಪಗಳು ಅರಳಿದ್ದವು. ರಾಜಕುಮಾರನು ಈ ಕೊಳದಲ್ಲಿ ಸ್ನಾನಮಾಡಿ ಅತ್ಯಂತ ಶ್ರದ್ಧಾಭಕ್ತಿಗಳ ಪೂರ್ವಕವಾಗಿ ಶಿವದೇವನನ್ನು ಆರಾಧಿಸಿದನು. ಪುನಹ ಹಿಂದಿರುಗಿ ಬರುವಾಗ ಇದೇ ಕೊಳದ ಕಮಲಗಳಿಂದ ಶಿವನನ್ನು ಆರಾಧಿಸುವೆನೆಂದು ಮನಸ್ಸಿನಲ್ಲೇ ನಿಶ್ಚಯಿಸಿದನು. ರಾಜಕುಮಾರನನ್ನೂ ಮಂತ್ರಿಪುತ್ರನನ್ನೂ ಬಹಳ ವಿಜೃಂಭಣೆಯಿಂದ ರಾಜನು ಸ್ವಾಗತಿಸಿದನು.

ಕೊನೆಗೆ ಯುವರಾಜ್ಞಿಯೊಡನೆ ಬೀಳ್ಕೊಟ್ಟನು. ಸಚಿವ ಪುತ್ರನು ರಥವನ್ನು ನಡೆಸುತಿದ್ದನು. ರಥವು ಶಿವಮಂದಿರದ ಹತ್ತಿರ ಬಂದೊಡನೆ ರಾಜಕುಮಾರನು ಇಳಿದನು. ಕೊಳದಲ್ಲಿ ಸ್ನಾನಮಾಡಲು ಹೋದನು. ಆದರೆ, ಕೊಳವು ತೀರ ಬತ್ತಿಹೋಗಿತ್ತು; ಮತ್ತು ಒಂದೂ ಕಮಲ ಪುಷ್ಪವಿ

ರಲಿಲ್ಲ. ಇದರಿಂದ ರಾಜಕುಮಾರನಿಗೆ ಅತ್ಯಂತ ಮನೋವ್ಯಥೆಯಾಯಿತು. ಅವನಿಗೆ ತನ್ನ ಇಚ್ಛಾನುಸಾರ ಶಿವನಿಗೆ ಕಮಲ ಪುಷ್ಪವನ್ನು ಅರ್ಪಿಸಲಾಗ ಲಿಲ್ಲ. ಇದೇ ಯೋಚನೆಯಲ್ಲಿರುವಾಗ ಆತನಿಗೆ ಅಂತಃಪ್ರೇರಣೆಯಾಯಿ ತೇನೆಂದರೆ–ದೇವರಿಗೆ ಅರ್ಪಿಸಲು ಕಮಲ ಪುಷ್ಪವಿಲ್ಲದಿದ್ದರೆ ತನ್ನ ಶಿರಕಮಲ ವನ್ನೇ ಏಕೆ ಅರ್ಪಿಸಬಾರದು? ಹೀಗೆ ಯೋಚಿಸಿ, ಹಿಂದುಮುಂದೆ ನೋಡದೆ ಅವನು ಕೂಡಲೇ ತನ್ನ ಖಡ್ಗದಿಂದ ತನ್ನ ಶಿರವನ್ನು ಕಡಿದು ಶಿವಲಿಂಗಕ್ಕೆ ಅರ್ಪಿಸಿದನು.

ಇದರ ನಡುವೆ ಸಚಿವಪುತ್ರನು, ಯುವರಾಜನು ಹಿಂದಿರುಗುವನೆಂದು ಕಾದುಕಾದು ಅತ್ಯಂತ ಚಿಂತಿತನಾದನು. ಕಾರಣವೇನೆಂದು ತಿಳಿದುಕೊಳ್ಳಲು ಶಿವಮಂದಿರದೊಳಗೆ ನಡೆದಾಗ ಶಿರವು ಕಡಿದು ಬಿದ್ದಿರುವುದನ್ನು ನೋಡಿ ದನು. ಅವನು ಅತ್ಯಂತ ದುಃಖಿತನಾದನು. ತನ್ನ ಶಿರವನ್ನು ಖಡ್ಗದಿಂದ ತುಂಡರಿಸಿದನು. ಸ್ವಲ್ಪ ಹೊತ್ತಿನ ಅನಂತರ ಯುವರಾಜ್ಞಿಯು ತನ್ನ ಪತಿ ಯನ್ನೂ ಆತನ ಮಿತ್ರನನ್ನೂ ಹುಡುಕಿಕೊಂಡು ಮಂದಿರಕ್ಕೆ ಹೋದಳು. ಅಲ್ಲಿ ಇಬ್ಬರ ಶಿರಗಳೂ ಕಡಿದು ಬಿದ್ದಿರುವುದನ್ನು ನೋಡಿ, ಅತ್ಯಂತ ವ್ಯಾಕು ಲಪಟ್ಟು ತಾನೂ ಆತ್ಮಹತ್ಯಮಾಡಿಕೊಳ್ಳಲು ಉದ್ಯುಕ್ತಳಾದಳು. ಈ ಕರುಣ ದೃಶ್ಯದಿಂದ ಭಗವಾನ್ ಶಿವನ ಆಸನವು ಡೋಲಾಯಮಾನವಾ ಯಿತು. ಅವನು ಬ್ರಾಹ್ಮಣ ರೂಪದಲ್ಲಿ ಪ್ರಕಟನಾಗಿ ಕೂಡಲೇ ಯುವ ರಾಜ್ಞಿಯ ಕೈಯನ್ನು ಹಿಡಿದು, “ನಿಲ್ಲು, ನಿಲ್ಲು! ನೀನು ನನ್ನೊಡನೆ ಏನು ವರವನ್ನು ಬೇಡುವೆ?” ಎಂದು ಕೇಳಿದನು.

ರಾಜಕುಮಾರಿಯು ಹೀಗೆ ಉತ್ತರ ಕೊಟ್ಟಳು: “ಈ ಇಬ್ಬರೂ ಪುನಃ ಜೀವಿಸಿ ಸುಖಜೀವನವನ್ನು ನಡೆಸಲೆಂದು ನಾನು ಇಚ್ಛಿಸುತ್ತೇನೆ.”

“ತಥಾಸ್ತು! ಅವರ ಕಡಿದ ಶಿರಗಳನ್ನು ಅವರವರ ದೇಹಗಳಿಗೆ ಜೋಡಿಸಿ ಕೆಲವು ಕ್ಷಣಗಳ ವರೆಗೆ ಬಟ್ಟೆಯಿಂದ ಮುಚ್ಚಿಡು—” ಎಂದು ಹೇಳಿ ಬ್ರಾಹ್ಮಣನು ಅಂತರ್ಧಾನನಾದನು.

ರಾಜಕುಮಾರಿಯು ಅವನ ಆಜ್ಞೆಯನ್ನು ಪಾಲಿಸಿದಳು. ಆದರೆ, ಇಬ್ಬರೂ ಎದ್ದಾಗ ಆಕೆಗೆ ತನ್ನ ತಪ್ಪು ತಿಳಿದುಬಂತು. ಅವಳು ರಾಜ ಕುಮಾರನ ಶಿರವನ್ನು ಮಂತ್ರಿಪುತ್ರನ ದೇಹಕ್ಕೂ ಮಂತ್ರಿಪುತ್ರನ ಶಿರವನ್ನು ರಾಜಕುಮಾರನ ದೇಹಕ್ಕೂ ಜೋಡಿಸಿಬಿಟ್ಟಿದ್ದಳು. ತಾನು ಈಗ ಯಾರ

ಪತ್ನಿಯೆಂದು ಅವಳು ಬಹಳ ವ್ಯಸನಾಕ್ರಾಂತಳಾದಳು. "ಆದ್ದರಿಂದ, ಓ ರಾಣಿಯ ಸರವೇ! ನೀನು ಯುವರಾಜ್ಞಿಯ ಸಮಸ್ಯೆಯನ್ನು ಪರಿಹರಿಸ ಬಲ್ಲೆಯಾ?"— ಎಂದು ರಾಜಾ ವಿಕ್ರಮನು ಕೇಳಿದನು.

ಬೇತಾಲನು ಕೂಡಲೇ ಉತ್ತರಕೊಟ್ಟನು: "ಇದು ಸ್ಪಷ್ಟವಾಗಿಯೇ ಇದೆ. ಯಾರ ಕೈಯು ರಾಜಕುಮಾರಿಯನ್ನು ಗ್ರಹಣಮಾಡಿತ್ತೋ ಅವಳು ಅವನದೇ ಪತ್ನಿಯಾಗಬೇಕು. ಶಿರವು ಕೇವಲ ಶರೀರದ ಒಂದು ಅಂಗವಾಗಿರುವುದು."

ಈ ಉತ್ತರವನ್ನು ಕೇಳಿ ಮೂಕರಾಣಿಯು ಬಹಳ ಕೋಪಗೊಂಡಳು ಮತ್ತು ಸರವನ್ನು ತೆಗೆದು ಬಿಸಾಡಿದಳು: "ಏ ಸುಳ್ಳು ಹಾರವೇ! ನೀನು ನನ್ನೊಡನಿರಲು ಯೋಗ್ಯನಲ್ಲ. ಮನುಷ್ಯನ ಗುರುತು ಮುಖದಿಂದಲೇ ಹತ್ತುವುದರಿಂದ ಯುವರಾಜ್ಞಿಯು ರಾಜಕುಮಾರನ ಮುಖವನ್ನೇ ಪ್ರೀತಿಸುವಳು. ಆದ್ದರಿಂದ ರಾಜಕುಮಾರನ ಮುಖವನ್ನು ಜೋಡಿಸಿದ ದೇಹದೊಡನೇ ಆಕೆ ಇರಬೇಕು."

"ರಾಣಿಯೇ, ಶಹಭಾಸ್! ನೀನು ಹೇಳಿದ್ದು ಸರಿ. ನೀನು ರಾಜನ ಮಾತಿಗೆ ಸ್ವತಹ ಉತ್ತರ ಕೊಟ್ಟದ್ದನ್ನು ನೋಡಿ ನನಗೆ ಬಹಳ ಆನಂದವಾಯಿತು. ನಿನ್ನ ಎರಡನೇ ಘಂಟೆಯೂ ನಷ್ಟವಾಗುವುದು"— ಎಂದು ಬೇತಾಲನು ಹೇಳಿದನು.

ರಾಣಿಯು ಈಗ ತೀರ ಸುಮ್ಮನಾದಳು. ಆಗ ವಿಕ್ರಮರಾಜನು ಇನ್ನೊಂದು ಕಥೆಯನ್ನು ಹೇಳಬೇಕಾಯಿತು. ಬೇತಾಲನು ಈಗ ರಾಣಿಯ ಬಳಿಯಲ್ಲಿ ಅಡಗಿಕೊಂಡು ರಾಜನ ಕಥೆಯನ್ನು ಕೇಳತೊಡಗಿದನು.

ಸೌರಾಷ್ಟ್ರದೇಶದಲ್ಲಿ ಓರ್ವ ಬಹಳ ಧಾರ್ಮಿಕನಾದ ಸಾಹುಕಾರನಿದ್ದನು. ಅವನು ಮಹಾಕಾಳಿಯ ಅನನ್ಯಭಕ್ತನಾಗಿದ್ದನು. ಅವನಿಗೆ ಸಂತಾನವಿರಲಿಲ್ಲ. ಒಂದು ದಿನ ದೇವಿಯು ಆತನ ಭಕ್ತಿಗೆ ಮೆಚ್ಚಿ ಸಂತಾನವಾಗಲೆಂದು ಹರಸಿದಳು. ಕೆಲವು ತಿಂಗಳ ನಂತರ ಆ ಸಾಹುಕಾರನ ಹೆಂಡತಿಯು ಒಂದು ಸುಂದರವಾದ ಹೆಣ್ಣುಮಗುವನ್ನು ಹೆತ್ತಳು. ಅವಳು ದೊಡ್ಡವಳಾದ ಮೇಲೆ ಸಾಹುಕಾರನು ತನ್ನ ಸಂಬಂಧಿಕರನ್ನೂ ಮಿತ್ರರನ್ನೂ ಕರೆದು, ಆ ಹುಡುಗಿಗೆ ಅನುರೂಪನಾದ ವರನು ಸಿಕ್ಕಿದರೆ ಹೇಳಬೇಕೆಂದು ಪ್ರಾರ್ಥಿಸಿದನು.

ಹುಡುಗಿಯು ಚಿಕ್ಕಪ್ಪನು ಆಕೆಗಾಗಿ ಓರ್ವ ಸುಂದರ ತರುಣನನ್ನು ಹುಡುಕಿದನು. ಸಾಹುಕಾರನ ಒಬ್ಬ ವಿಶ್ವಸ್ತ ಮಿತ್ರನೂ ಒಬ್ಬ ಸುಂದರ, ಯೋಗ್ಯ, ಸರ್ವಗುಣ ಸಂಪನ್ನನಾದ ಯುವಕನನ್ನು ಹುಡುಕಿ, ಅವನಿಗೆ ಸಾಹುಕಾರನ ಮಗಳೊಡನೆ ಮದುವೆ ಮಾಡಿಸುವೆನೆಂದು ಪ್ರತಿಜ್ಞೆ ಮಾಡಿದನು. ಇತ್ತ ಸ್ವತಹ ಸಾಹುಕಾರನಿಗೂ, ವರಾನ್ವೇಷಣೆಗೆ ಹೊರಟಾಗ ಒಬ್ಬ ಒಳ್ಳೆಯ ವರನು ಸಿಕ್ಕಿದನು. ಈ ರೀತಿಯಲ್ಲಿ ಸಂಯೋಗವಶಾತ್ ಮೂವರು ವರರ ಸಮಾಗಮವು ಒಮ್ಮೆಗೇ ಆಯಿತು, ಮೂವರೂ ಮನಸ್ಸಿನಲ್ಲಿ ಕ್ರೋಧಗೊಂಡು, ಯಾರು ಹುಡುಗಿಯನ್ನು ಮದುವೆಯಾಗುವರೆಂದು ಪ್ರತೀಕ್ಷಿಸುತಿದ್ದರು.

ಇತ್ತ ವಿವಾಹವುಂಟಿಸಕ್ಕೆ ಕೊಂಡೊಯ್ಯುವುದಕ್ಕಾಗಿ ಹುಡುಗಿಯನ್ನು ಸ್ನಾನಮಾಡಿಸುವಾಗ, ಒಂದು ಭಯಂಕರ ಸರ್ಪವು ಬಂದು ಆಕೆಯ ಕಾಲಿನ ಅಂಗುಷ್ಠವನ್ನು ಕಚ್ಚಿತು. ತಕ್ಷಣವೇ ಅವಳು ಸತ್ತು ಬಿದ್ದಳು. ಸಮಸ್ತ ಆನಂದವೂ ಉಲ್ಲಾಸವೂ ದುಃಖದಲ್ಲಿಯೂ ಔದಾಸೀನ್ಯದಲ್ಲಿಯೂ ಪರಿವರ್ತಿಸಿತು. ವಧುವಿನ ಶವದಹನ ಸಂಸ್ಕಾರ ಮಾಡಲಾಯಿತು. ಇದರಿಂದ ಮೂವರು ಯುವಕರೂ ಸಂತಪ್ತರಾಗಿ, ಸಂಸಾರಿಕ ಸುಖಗಳನ್ನು ಪರಿತ್ಯಜಿಸಿ, ವಿರಕ್ತ ವೇಷವನ್ನು ಧರಿಸಿದರು. ಅವರಲ್ಲೊಬ್ಬನು ಹುಡುಗಿಯ ಅಸ್ಥಿಗಳನ್ನು ಗಂಗೆಯಲ್ಲಿ ಹಾಕಲು ತೆಗೆದುಕೊಂಡು ಹೋದನು; ಮತ್ತೊಬ್ಬನು ಅವಳ ಆತ್ಮದ ಶಾಂತಿಗಾಗಿ ಸಮಸ್ತ ತೀರ್ಥಯಾತ್ರೆಗಳನ್ನು ಮಾಡಿ ಬರುವೆನೆಂದು ಪ್ರತಿಜ್ಞೆ ಮಾಡಿದನು. ಮೂರನೆಯವನು ಆಕೆಯ ಚಿತಾಭಸ್ಮವನ್ನು ಒಟ್ಟುಗೂಡಿಸಿ ಅಲ್ಲಿಯೇ ಸಮಾಧಿ ಸ್ಥಾನದಲ್ಲಿ ಸಾಧುವಿನಂತೆ ವಾಸಿಸತೊಡಗಿದನು.

ಸಮಸ್ತ ತೀರ್ಥಯಾತ್ರೆಗಳನ್ನು ಮಾಡಲು ಹೋದವನು ಹತ್ತು ತಿಂಗಳ ಅನಂತರ ದಕ್ಷಿಣ ದೇಶವನ್ನು ಮುಟ್ಟಿದನು. ಅಲ್ಲಿ ಒಬ್ಬಳು ಅನನ್ಯ ಭಕ್ತಿಪರಾಯಣೆಯಾದ ಮಹಿಳೆಯೊಡನೆ ಭೋಜನವನ್ನು ಯಾಚಿಸಿದನು. ಮಹಿಳೆಯು ಆತನನ್ನು ಸ್ವಾಗತಿಸಿ ಗಂಡನು ಬರುವ ವರೆಗೆ ಪ್ರತೀಕ್ಷಿಸಲು ಹೇಳಿದಳು. ಈ ಪ್ರಕಾರವಾಗಿ ಅವನು ಆಕೆಯ ಪತಿಯ ಪ್ರತೀಕ್ಷೆಯಲ್ಲಿರುವಾಗ ಆ ಸ್ತ್ರೀಯ ಮಗುವೊಂದು ಗೊಂದಲವೆಬ್ಬಿಸಿತು. ಇದರಿಂದ ಅವಳು ಅತ್ಯಂತ ಕ್ರೋಧಗೊಂಡು, ಆ ಮಗುವಿನ ತಲೆಯನ್ನು, ಕಡಿಯುವ ಕಲ್ಲಿಗೆ

ಹೊಡೆದಳು. ಈ ಕರುಣ ದೃಶ್ಯವನ್ನು ನೋಡಿ ಆ ಸಾಧುವು ಅತ್ಯಂತ ವೇದನೆಗೊಂಡು, ಇಂಥ ಮನೆಯಲ್ಲಿ ಭೋಜನಮಾಡುವುದು ಪಾಪವೆಂದು ತಿಳಿದನು. ಅಲ್ಲಿಂದ ಅವನು ಹೊರಟು ಹೋಗುವಾಗ ದಾರಿಯಲ್ಲಿ ಆ ಸ್ತ್ರೀಯ ಪತಿಯು ಸಿಕ್ಕಿದನು. ಅವನು, ಸಾಧುವಿಗೆ, ಭೋಜನ ಮಾಡಬೇಕೆಂದು ತುಂಬ ಅಗ್ರಹಮಾಡಿದನು. ಸಾಧುವು ಆತನ ಮನೆಯಲ್ಲಿ ನಡೆದ ಘಟನೆಯನ್ನು ವರ್ಣಿಸಿ, ಇಂಥ ತಾಮಸಿಕ ಸ್ಥಾನದಲ್ಲಿ ತಾವು ಭೋಜನಮಾಡುವುದಿಲ್ಲವೆಂದು ಹೇಳಿದನು. ಈ ಮಾತುಗಳೆಲ್ಲವನ್ನೂ ಕೇಳಿ ಸ್ತ್ರೀಯ ಗಂಡನು ನಕ್ಕನು. ಮತ್ತು ಹೇಳಿದನು: "ತಾವು ಈ ವಿಷಯದಲ್ಲಿ ಚಿಂತಿಸಬೇಡಿ ತಾವು ನನ್ನೊಟ್ಟಿಗೆ ಬಂದು ನನ್ನ ಶಕ್ತಿಯ ಚಮತ್ಕಾರವನ್ನು ನೋಡಿರಿ" ಸಾಧುವು ಅವನ ಹೇಳಿಕೆಯಂತೆ ಅವನನ್ನು ಅನುಸರಿಸಿದನು. ಮನೆಗೆ ಮುಟ್ಟುತ್ತಲೇ ಆ ಬ್ರಾಹ್ಮಣನು ಮಗುವಿನ ಬೂದಿಯನ್ನು ಒಟ್ಟು ಮಾಡಿ ಕೆಲವು ಮಂತ್ರಗಳನ್ನು ಉಚ್ಚರಿಸಿದನು. ಇದರಿಂದ ಬಾಲಕನು ಪುನಃ ಜೀವಿಸಿಕೊಂಡನು. ಇದನ್ನು ನೋಡಿ ಸಾಧುವು ಬಹಳ ಕುತೂಹಲಗೊಂಡು ಹೇಳಿದನು: "ನೀನು ಈ ಮಂತ್ರವನ್ನು ಹೇಳಿಕೊಡದ ವಿನಾ ನಿನ್ನ ಮನೆಯಲ್ಲಿ ಊಟಮಾಡಲಾರೆ"

ಬ್ರಾಹ್ಮಣನು, ಈ ಮಂತ್ರವನ್ನು ಕಲಿಸಲು ಒಂದು ಶರ್ತವನ್ನು ಮುಂದಿಟ್ಟನು. ಅದೇನೆಂದರೆ, ಈ ಮಂತ್ರವನ್ನು ಒಂದೇ ಬಾರಿ ಪ್ರಯೋಗಿಸಬೇಕು. ಆಗ ಮಾತ್ರ ತಾನು ಹೇಳಿಕೊಡುವೆನೆಂದನು. ಸಾಧುವು ಇದಕ್ಕೊಪ್ಪಿ, ಮಂತ್ರವನ್ನು ಕಲಿತುಕೊಂಡು, ಅವನಲ್ಲಿ ಭೋಜನಮಾಡಿದನು.

ತದನಂತರ ಅವನು ಸಾಹುಕಾರನ ಮಗಳ ಸಮಾಧಿಗೆ ಪುನಹ ಬಂದನು. ಅಷ್ಟರಲ್ಲಿ ಆಕೆಯ ಅಸ್ಥಿಗಳನ್ನು ಗಂಗೆಯಲ್ಲಿ ಹಾಕಲು ಹೋದವನು ಹಿಂದೆ ಬಂದನು. ಹೀಗೆ ಸಾಧುವು ತನ್ನ ಇಬ್ಬರು ಪ್ರತಿದ್ವಂದ್ವಿಗಳ ಮುಂದೆ, ಮಂತ್ರಗಳ ಪ್ರಭಾವದಿಂದ ಆ ಸಾಹುಕಾರನ ಕನ್ಯೆಗೆ ಜೀವದಾನವನ್ನಿತ್ತನು. ನಿದ್ದೆಯಿಂದ ಎಚ್ಚೆತ್ತವಳಂತೆ ಅವಳು ಎದ್ದು ನಿಂತಳು. ಮೂವರು ಪ್ರತಿದ್ವಂದ್ವಿಗಳೊಳಗೆ ವಾದ-ವಿವಾದ ತೊಡಗಿತು. ಒಬ್ಬನು ತಾನು ಮಂತ್ರಬಲದಿಂದ ಜೀವಗೊಳಿಸಿದೆನೆಂದು ಹೇಳಿದನು. ಸಮಾಧಿ ಸ್ಥಾನದಲ್ಲಿ ಸಾಧುವಿನ ವೇಷದಿಂದ ವಾಸಿಸುತಿದ್ದವನು, ಚಿತಾಭಸ್ಮವನ್ನು ತಾನು ರಕ್ಷಿಸ

ದಿದ್ದರೆ ನಿನ್ನ ಮಂತ್ರವು ವ್ಯರ್ಥವಾಗುತಿತ್ತೆಂದು ಹೇಳಿದನು. ಮೂರನೆಯವನು, ಇದು, ತಾನು ಮಾಡಿದ ಯಾತ್ರೆಯಿಂದ ಭಾಗೀರಥಿಯು ಅನುಗ್ರಹಿಸಿದಳೆಂದು ಹೇಳಿದನು. ಆದುದರಿಂದ, ರಾಣಿಯು ಕಂಕಣವೇ, ಸಾಹುಕಾರನ ಮಗಳ ಅಧಿಕಾರವನ್ನು ಯಾರು ಪಡೆಯಬಹುದೆಂದು ನೀನು ಹೇಳಬಲ್ಲೆಯಾ?"

ಕಂಕಣವು ಹೀಗೆ ಉತ್ತರ ಕೊಟ್ಟಿತು: "ಇದರ ಉತ್ತರವನ್ನು ಹೇಳುವುದು ಬಹು ಸುಲಭ. ಯಾರ ಮಂತ್ರಬಲದಿಂದ ಆಕೆಗೆ ಜೀವದಾನವಾಯಿತೋ ಆಕೆ ಅವನ ಪತ್ನಿಯಾಗಬೇಕು.''

ಈ ಉತ್ತರವನ್ನು ಕೇಳಿ ಮೂಕರಾಣಿಯು ಅತ್ಯಂತ ಕುಪಿತಳಾಗಿ ಹೇಳಿದಳು: "ಓ ಕಂಕಣವೇ! ನಿನಗೆ ಸ್ವಲ್ಪವೂ ಬುದ್ಧಿಯಿಲ್ಲ. ಪುನರ್ಜೀವವನ್ನು ಕೊಟ್ಟವನು ಆಕೆಯ ತಂದೆಯಾದನು. ಗಂಗೆಯಲ್ಲಿ ಅಸ್ಥಿ ವಿಸರ್ಜಿಸಿದವನು ಆಕೆಗೆ ಮಗನಾದನು. ಆದ್ದರಿಂದ ಅವಳ ಸಮಾಧಿಯ ಬಳಿ ಇಷ್ಟು ದಿನ ವಾಸಿಸಿದವನೇ ಅವಳ ಸಹಚರನಾಗಲು ಯೋಗ್ಯನು.''

ರಾಣಿಯು ಮಾತಾಡುತ್ತಲೇ ಮೂರನೇ ಘರದೆಯೂ ಬಿತ್ತು. ಕೇವಲ ಒಂದೇ ಘರದೆಯು ರಾಣಿಯ ಮತ್ತು ವಿಕ್ರಮರಾಜನ ನಡುವೆ ಉಳಿಯಿತು. ಈ ಸಲ ಬೇತಾಳನು ರಾಣಿಯ ಕಾಲುಗೆಜ್ಜೆಯಲ್ಲಿ ಅದೃಶ್ಯ ರೂಪದಲ್ಲಿ ಕುಳಿತುಕೊಂಡು ಕಥೆ ಕೇಳತೊಡಗಿದನು.

ಪೂರೇಶ್ವರ ನಗರದಲ್ಲಿ ಒಬ್ಬ ಅಂಧ ಶೂದ್ರನು ತನ್ನ ಚಿಕ್ಕಪ್ಪನೊಡನೆ ವಾಸಿಸುತಿದ್ದನು. ಅವನ ನೆರೆಮನೆಯಲ್ಲೇ ಒಬ್ಬ ಶೂದ್ರ ಕುಂಟನು ತನ್ನ ಅಣ್ಣನೊಡನೆ ದಿನಕಳೆಯುತಿದ್ದನು. ಪ್ರತಿಕ್ಷಣವೂ ಈ ಇಬ್ಬರೊಳಗೆ ಮೈತ್ರಿಯು ಹೆಚ್ಚುತಿತ್ತು. ಒಂದು ದಿನ ಇವರಿಬ್ಬರೂ ತಮ್ಮ ಅದೃಷ್ಟವನ್ನು ನೋಡಲು ಒಂದು ದೂರದೇಶಕ್ಕೆ ಹೊರಟರು. ಕುಂಟನು ಅಂಧನ ಬೆನ್ನಲ್ಲಿ ಕುಳಿತುಕೊಂಡು ದಾರಿಹೇಳಿದನು.

ಕೆಲದಿನಗಳ ಅನಂತರ ಅವರು ಪೂರ್ವದಿಕ್ಕಿಗೆ ಮುಟ್ಟಿದರು. ಅಲ್ಲಿ ಒಂದು ಹೆಣ್ಣಾನೆಯು ಸೊಂಡಿಲಲ್ಲಿ ನೀರಿನ ಮಡಕೆಯನ್ನು ಹಿಡಕೊಂಡು ತಿರುಗಾಡುತ್ತಿರುವುದನ್ನು ಇವರು ಕಂಡರು. ಅದು, ಒಬ್ಬಳು ಕುಬ್ಜೆ ರಾಜಕುಮಾರಿಗಾಗಿ ವರನನ್ನು ಹುಡುಕುತಿತ್ತು. ಅವಳನ್ನು ಮದುವೆಯಾಗಲು ಯಾರೂ ಒಪ್ಪುತ್ತಿರಲಿಲ್ಲ. ಅದಕ್ಕಾಗಿ ಜನರು ಈ ಕೆಲಸ

ವನ್ನು ಆನೆಗೆ ಕೊಟ್ಟಿದ್ದರು. ಆನೆಯು ಕುಂಟನೂ ಕುರುಡನೂ ಇದ್ದೆಡೆಗೆ ಓಡುವುದನ್ನು ನೋಡಿ ಜನರು ಆಶ್ಚರ್ಯಪಟ್ಟರು. ಆನೆಯು ಬಂದು, ನೀರಿನ ಕೊಡವನ್ನು ಇವರಿಬ್ಬರ ತಲೆಯ ಮೇಲೆ ಹಿಡಿದು ನೀರನ್ನು ಚೆಲ್ಲಿತು. ಸೈನಿಕರು ತಕ್ಷಣ ಇವರನ್ನು ರಾಜಮಹಲಿಗೆ ಒಯ್ದರು; ಮತ್ತು ರಾಜ ಕುಮಾರಿಯ ವಿವಾಹವನ್ನು ಇಬ್ಬರೊಡನೆ ಏರ್ಪಡಿಸಿದರು. ಮೂವರೂ ಅತ್ಯಂತ ಆನಂದದಿಂದಿದ್ದರು:

ಆದರೆ ಸ್ವಲ್ಪ ಕಾಲದಲ್ಲೆ ಇವರಿಬ್ಬರಲ್ಲಿ ವೈಮನಸ್ಸು ಉಂಟಾಯಿತು. ಕುಂಟನು ರಾಜಕುಮಾರಿಯೊಡನೆ ಸೇರಿ ಅಂಧನನ್ನು ಕೊಲ್ಲುವ ಹಂಚಿಕೆ ಹೂಡಿದನು. ರಾಜಕುಮಾರಿ ಮತ್ತು ಕುಂಟನು ಸೇರಿ, ಪಲ್ಯದಲ್ಲಿ ಸತ್ತ ಸರ್ಪವನ್ನು ಕತ್ತರಿಸಿಹಾಕಿದರು. ಅಂಧನು ಬಹಳ ಹಸಿದಿದ್ದನು. ಅವನು ಮೆಲ್ಲನೆ ಅಡಿಗೆಕೋಣೆಗೆ ಹೋಗಿ ಪಲ್ಯವನ್ನು ಬಡಿಸಲು ಪಾತ್ರೆಯ ಬಾಯನ್ನು ತೆರೆದನು. ಆಗ ವಿಷಪೂರಿತ ತೀಕ್ಷ್ಣ ಆವಿಯು ಅವನ ಕಣ್ಣು ಗಳಿಗೆ ಬಡಿದು, ಕಣ್ಣುಗೊಂಬೆಗಳನ್ನು ಸ್ವಚ್ಛಪಡಿಸಿತು. ಅಂಧನಿಗೆ ಸರಿ ಯಾಗಿ ಕಾಣಿಸಿತು. ಅವನಿಗೆ, ಪಲ್ಯದಲ್ಲಿ ವಿಷಸರ್ಪದ ತುಂಡುಗಳು ಕಂಡುಬಂದುವು. ಅವನಿಗೆ ಆಗ ಎಲ್ಲವೂ ಮನದಟ್ಟಾಯಿತು. ಅವನು ಕ್ರೋಧದಿಂದ ಎದ್ದುಬಂದು, ಕುಂಟನನ್ನು ಕುಮಾರಿಯ ಮೈಮೇಲೆ ದೂಡಿ ದನು. ಆಗ ಭಗವತ್ಕೃಪೆಯಿಂದ ಕುಂಟನ ಕಾಲು ನೇರವಾಯಿತು. ರಾಜ ಕುಮಾರಿಯ ಕುಬ್ಜವು ದಬ್ಬಿದಂತಾಗಿ, ಅವಳು ನೆಟ್ಟಗಾದಳು. ಮೂವರ ಶಾರೀರಿಕ ವ್ಯಾಧಿಗಳೂ ನಾಶವಾದುವು. ಆದರೆ, ಅಂಧನೂ ಕುಂಟನೂ ರಾಜಕುಮಾರಿಗಾಗಿ ಭಯಂಕರವಾಗಿ ಜಗಳಾಡತೊಡಗಿದರು. "ಆದುದ ರಿಂದ, (ವಿಕ್ರಮನು ಮಾಕರಾಣಿಯ ಗೆಜ್ಜೆಗಳೊಡನೆ) ಆ ರಾಜಕುಮಾ ರಿಯು ನಿಜವಾಗಿ ಯಾರೊಡನೆ ಇರಬೇಕು?"—ಎಂದು ಕೇಳಿದನು.

ಕುರುಡನೊಡನೆ ರಾಜಕುಮಾರಿಯು ಏಳು ಬಾರಿ ಅಗ್ನಿ ಪ್ರದಕ್ಷಿಣೆ ಮಾಡಿದ್ದರಿಂದ ಅವನ ಪತ್ನಿಯಾಗಬೇಕೆಂದು ಗೆಜ್ಜೆಯು ಹೇಳಿತು. ಈ ಉತ್ತರವು ಮಾಕರಾಣಿಗೆ ಸರಿದೋರಲಿಲ್ಲ. ಅಂಧನು ಕುಂಟನನ್ನು ಬೆನ್ನ ಮೇಲೇರಿಸಿ ಕೇವಲ ಕುದುರೆಯ ಕೆಲಸ ಮಾಡಿದ್ದರಿಂದ ಕುಂಟನೇ ಅವಳ ನಿಜವಾದ ಪತಿಯಾಗಬೇಕೆಂದು ರಾಣಿಯು ಹೇಳಿದಳು.

ನೈ! ಹೀಗೆ ಹೇಳುತ್ತಲೇ ಮಾಕರಾಣಿಯ ನಾಲ್ಕನೆಯ ಘರದೆಯೂ

ಬಿದ್ದುಬಿಟ್ಟಿತು. ಅವಳೂ ವಿಕ್ರಮರಾಜನೂ ಒಬ್ಬರೊಬ್ಬರ ಎದುರು ಕುಳಿತು ಕೊಂಡಿದ್ದರು. ಕೊನೆಗೆ ವಿಕ್ರಮನು ರಾಣಿಯೊಡನೆ, "ನೀನು ಬಹಳ ಭಾಗ್ಯವಂತಳಾಗಿರುವೆ. ಆದರೆ, ನಾನು ನಿನ್ನೊಡನೆ ವಿವಾಹವಾಗುವುದಿಲ್ಲ. ನಿನ್ನಿಂದ ಅಪಮಾನಿತರಾಗಿ ಅನೇಕ ವರ್ಷಗಳಿಂದ ಬಂಧಿಗಳಾಗಿ ಇರಿಸಲ್ಪಟ್ಟ ವರನ್ನು ಉದ್ಧರಿಸಲಿಕ್ಕಾಗಿ ನಾನು ಇಲ್ಲಿಗೆ ಬಂದೆನು. ದಯಮಾಡಿ ಅವರೆಲ್ಲರನ್ನು ಬಿಟ್ಟುಬಿಡು. ನೀನು ಪುರೋಹಿತನನ್ನು ಮದುವೆಯಾಗಬೇಕೆಂದು ನಾನು ಆಜ್ಞಾಪಿಸುತ್ತೇನೆ. ಅವನು ನಿನಗಾಗಿ ಅತ್ಯಂತ ದುಃಖಿತನೂ ಅಪಮಾನಿತನೂ ಆಗಿರುವನು" ಎಂದು ಹೇಳಿದನು.

(ಇಲ್ಲಿಗೆ ಈ ಕಥೆ ಸಂಪೂರ್ಣ.)

ಇಪ್ಪತ್ತೊಂಭತ್ತು ಏಕಾಂಕ ನಾಟಕಗಳು.

(ಕೆಲವು 16+4 ಪುಟಗಳ ; ಮತ್ತೆ ಕೆಲವು 20+4 ಪುಟಗಳು)

'ಒಂದಾಣೆ ಮಾಲೆ'ಯಲ್ಲಿ ಪ್ರಕಟವಾದ ಮೂವತ್ತು

ಏಕಾಂಕ ನಾಟಕಗಳಲ್ಲಿ ಈ ಕೆಳಗಿನವು(ಇಪ್ಪತ್ತೊಂಭತ್ತು) ದೊರೆವವು

೧ ನಾರೀಶ್ವರರು (ಪ್ರಹಸನ) — ಕುಡ್ಪಿ ವಾಸುದೇವ ಶೆಣೈ.
೨ ಬಾಬಿಗೆ ಬಾಸಿಂಗ ,, — ,, ,, ,,
೩ ಸತ್ಯವಂತ ಬಾಬಿ ,, — ,, ,, ,,
೪ ಮರ್ಜಿ ,, — ಡಾ। ಎಮ್. ಎನ್. ಕಾಮತ್.
೫ ಸತೀ ಸಾವಿತ್ರಿ (ಪೌರಾಣಿಕ) — ಶ್ರೀ। ಪಿ. ವೆಂಕಟ್ರಮಣ ಭಟ್ಟ.
೬ ಅಕಾಂಡ ತಾಂಡವ (ರೇಡಿಯೊನಾಟಕ) — ಶ್ರೀ। ಬಿ. ದಾಮೋದರ ಬಾಳಿಗ, ಬಿ ಎ
೭ ಮೀರಾಬಾಯಿ (ಐತಿಹಾಸಿಕ) — ಶ್ರೀ। ಸಂ. ಜ. ರಾವ್.
೮ ಚುಟ್ಟ ಬಿಟ್ಟ ದಿಕ್ಟ (ಪ್ರಹಸನ) — ಡಾ। ಎಸ್. ಪಿ ಭಟ್.
೯ ಜರಾಸಂಧ ವಧೆ (ಪೌರಾಣಿಕ) — ಶ್ರೀ। ಎ. ವಿ. ಮಯ್ಯ.
೧೦ ಸತ್ಯಹರಿಶ್ಚಂದ್ರ (ಪೌರಾಣಿಕ) — ಶ್ರೀ। ಪಿ. ವೆಂಕಟ್ರಮಣ ಭಟ್ಟ.
೧೧ ಮಾಯಾಮೃಗ (,,) — ಶ್ರೀ। ಎ. ವಿ. ಮಯ್ಯ.
೧೨ ಸತೀವೃಂದಾ (,,) — ಶ್ರೀ। ಕೆ. ಸುಭಾಷಚಂದ್ರ ಶೆಣೈ.
೧೩ ಗೌತಮನ ಗೃಹತ್ಯಾಗ, ಸಿದ್ಧಾರ್ಥನ ಕಾರುಣ್ಯ — ಶ್ರೀ। ಎಲ್. ಎಸ್. ನಾಯಕ.
೧೪ ಪುನರುಜ್ಜೀವನ (ಸಾಮಾಜಿಕ) — ಶ್ರೀ। ಗೋವಿಂದ ಭಟ್ಟ.
೧೫ ಸ್ವಾತಂತ್ರ್ಯ (,,) — ಶ್ರೀ। ಕೆ. ಎನ್. ಭಟ್, ಶಿರಾಡಿಪಾಲ್.
೧೬ ಭಕ್ತ ಕುಚೇಲ (ಪೌರಾಣಿಕ) — ಶ್ರೀ। ಅಂಬಾತನಯ.
೧೭ ಮದ್ವ ಅವಾಂತರ (ಪ್ರಹಸನ) — ಅಷ್ಟಾವಕ್ರ.
೧೮ ಗ್ರಾಮಸ್ವಾತಂತ್ರ್ಯ ,, — ಶ್ರೀ। ಎ. ವಿ. ಮಯ್ಯ.
೧೯ ಭಕ್ತ ಧ್ರುವ (ಪೌರಾಣಿಕ) — ಶ್ರೀ। ಸುಬ್ರಾಯ.
೨೦ ಬೇಡನ ಮಗಳು ,, — ಶ್ರೀ। ವೆಂಕಟರಾಜ ಪುಣಿಂಚತ್ತಾಯ.
೨೧ ಪುರಂದರದಾಸರು (ಐತಿಹಾಸಿಕ) — ಬಿ. ಪದ್ಮನಾಭ ಸೋಮಯಾಜಿ.
೨೨ ವೀರಾಗ್ರಣಿ ಕರ್ಣ (ಪೌರಾಣಿಕ) — ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ.
೨೩ ಕುಶ–ಲವ ,, — ಶ್ರೀ। ಬಿ. ಈಶ್ವರಯ್ಯ.
೨೪ ಅಕ್ಷಯಪಾತ್ರೆ (ಸಾಮಾಜಿಕ) — ಶ್ರೀ। ಟಿ. ಚಂದ್ರರಾಜ ಸೆಟ್ಟಿ
೨೫ ವೈರಾಗ್ಯಸಿಧಿ (ತರಂಗರೂಪಕ) — ಶ್ರೀ। ಕೆ. ಎಸ್. ಶರ್ಮ, ವಿದ್ವಾನ್.
೨೬ ಭರತನ ಬಂಧುಪ್ರೇಮ (ಪೌರಾಣಿಕ) — ಶ್ರೀ। ಅಮ್ಮೆಂಬಳ ಅನಂತಯ್ಯ ನಾವಡ.
೨೭. ಮಹಾತ್ಮಾ ಉದಂಕ — ಶ್ರೀ। ಮಣೇಲ 'ಶಿವಶಂಕರ', ಪುಣಚಾ.
೨೮. ಭಕ್ತ ಪ್ರಹ್ಲಾದ (ಪೌರಾಣಿಕ) — ಶ್ರೀ। ಎ. ವಿ. ಮಯ್ಯ.
೨೯. ಅಭಿಮನ್ಯು ,, — ಶ್ರೀ। ಬಿ. ಈಶ್ವರಯ್ಯ.

Edited, Printed & Published by K. V. Shenoy
at The Prabhat Printers, Ltd., Mangalore.